ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ವಿವಿಪ/ಅಸಾಮಾನ್ಯ/153/2022-23 ದಿನಾಂಕ:10.08.2022.

ಗೆ,

ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 06.08.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.**

***

ದಿನಾಂಕ: 06.08.2022 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬೆಂ.ನ.ವಿ/ವಿವಿಪ/ಅಸಾಮಾನ್ಯ/ 153 /2022–23 ದಿನಾಂಕ: 10.08.2022.

ದಿನಾಂಕ 06.08.2022 ರಂದು ಪೂರ್ವಾಹ್ನ 10.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ಇಲ್ಲಿ ಜರುಗಿದ್ದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

ನಿಗದಿತ 10.30 ಗಂಟೆಯ ಸಮಯಕ್ಕೆ ಸಭೆ ನಡೆಸಲು ಅಗತ್ಯವಾದ 21 ಸದಸ್ಯರ ಕೋರಂ ಇಲ್ಲದಿರುವುದನ್ನು ಗಮನಿಸಿ ಕೋರಂ ಅಭಾವದಿಂದಾಗಿ ಸಭೆಯನ್ನು 15 ನಿಮಿಷಗಳ ಅವಧಿಗೆ ಮುಂದೂಡಲಾಯಿತು. ಅದರಂತೆ 10 ಗಂಟೆಗೆ 45 ನಿಮಿಷಗಳಿಗೆ ಪ್ರಾರಂಭವಾದ ಸಭೆಯಲ್ಲಿ 28 ಸದಸ್ಯರು ಉಪಸ್ಥಿತರಿದ್ದು ಸಭೆಯನ್ನು ಪ್ರಾರಂಭಿಸಲಾಯಿತು

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ | ಸಭಾಧ್ಯಕ್ಷರು |
| 2. | ಶ್ರೀ ಎಸ್. ಕೇಶವ ಪ್ರಸಾದ್ | ಸದಸ್ಯರು |
| 3. | ಶ್ರೀ ಕೆ. ಎ. ತಿಪ್ಪೇಸ್ವಾಮಿ | ಸದಸ್ಯರು |
| 4. | ಪ್ರೊ. ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 5. | ಡಾ. ಶಿಂಟಿ ಆಂಟನಿ | ಸದಸ್ಯರು |
| 6. | ಶ್ರೀ. ಕೆ. ಶಿವಣ್ಣ | ಸದಸ್ಯರು |
| 7. | ಡಾ. ಗುರುನಾಥರಾವ್ ವೈದ್ಯ | ಸದಸ್ಯರು |
| 8. | ಡಾ. ಅನೇಸಿಯಾ | ಸದಸ್ಯರು |
| 9. | ಶ್ರೀ. ಕೆ. ಎಂ ಮಹೇಶ್ | ಸದಸ್ಯರು |
| 10. | ಶ್ರೀ. ಎಂ ಸತೀಶ್ | ಸದಸ್ಯರು |
| 11. | ಡಾ. ಮೊಹಮ್ಮದ್ ಸುಹೇಲ್ ಇಕ್ಬಾಲ್ | ಸದಸ್ಯರು |
| 12. | ಶ್ರೀ. ಸಿ. ಎಂ. ನವೀನ್ ಕುಮಾರ್ | ಸದಸ್ಯರು |
| 13. | ಡಾ. ಸುಪ್ರೀತ್ ಕಿತ್ತನಕೆರೆ | ಸದಸ್ಯರು |
| 14. | ಶ್ರೀ ಕುಮಾರ್ ಆರ್ ಎನ್ | ಸದಸ್ಯರು |
| 15. | ಡಾ. ಎಂ. ಪಾಂಡುರಂಗಪ್ಪ | ಸದಸ್ಯರು |
| 16. | ಡಾ. ಎಂ. ಮುನಿರಾಜು | ಸದಸ್ಯರು |
| 17. | ಡಾ. ವಿ. ಗಾಯತ್ರಿ | ಸದಸ್ಯರು |
| 18. | ಡಾ. ಎಸ್ ಹರಿಪ್ರಸಾದ್ | ಸದಸ್ಯರು |
| 19. | ಡಾ. ಕೆ ಶಿವಶಂಕರ | ಸದಸ್ಯರು |
| 20. | ಡಾ. ವಿ.ಆರ್ ದೇವರಾಜು | ಸದಸ್ಯರು |

| | | |
|---|---|---|
| 21. | ಡಾ. ಎನ್ ನರಸಿಂಹಮೂರ್ತಿ | ಸದಸ್ಯರು |
| 22. | ಶ್ರೀ. ಎಸ್ ಚನ್ನಕೇಶವ | ಸದಸ್ಯರು |
| 23. | ಶ್ರೀ. ಸುನೀಲ್ ಎಡ್ವರ್ಡ್ ಮೆಂಡೇಸ್ | ಸದಸ್ಯರು |
| 24. | ಶ್ರೀ ಯೋಗೇಶ್ ಎಸ್ ರಾವ್ | ಸದಸ್ಯರು |
| 25. | ಶ್ರೀ ಆತ್ಮ ಹಿರೇಮಠ | ಸದಸ್ಯರು |
| 26. | ಡಾ. ವಿ.ಲೋಕೇಶ್<br>ಕುಲಸಚಿವರು ಮೌಲ್ಯಮಾಪನ | ಸದಸ್ಯರು |
| 27. | ಶ್ರೀ ರಘು ಜಿ. ಪಿ<br>ವಿತ್ತಾಧಿಕಾರಿಗಳು | ಸದಸ್ಯರು |
| 28. | ಶ್ರೀ. ಸಿ. ಎನ್ ಶ್ರೀಧರ್<br>ಕುಲಸಚಿವರು | ಸದಸ್ಯ<br>ಕಾರ್ಯದರ್ಶಿಗಳು |

ಕುಲಸಚಿವರು ಸಭೆಯಲ್ಲಿ ಉಪಸ್ಥಿತಿರಿದ್ದ ಎಲ್ಲ ಗೌರವಾನ್ವಿತ ಸದಸ್ಯರಿಗೆ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಗೆ ಸ್ವಾಗತವನ್ನು ಕೋರಿ ಕಾರ್ಯಸೂಚಿಯನ್ನು ಮಂಡಿಸಲು ಸಭಾಧ್ಯಕ್ಷರ ಅನುಮತಿ ಕೋರಿ ಕಾರ್ಯಸೂಚಿಯನ್ನು ಮಂಡಿಸಿದರು.

ಕುಲಪತಿಗಳು ಎಲ್ಲ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಧ್ಯಕ್ಷರಿಂದ, ನಾಮಕರಣಗೊಂಡ ವಿಧಾನ ಪರಿಷತ್ತಿನ ಸನ್ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ ಅವರನ್ನು ಸಭೆಗೆ ಪರಿಚಯಿಸಿ, ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ ಕಾರ್ಯಸೂಚಿಯನ್ನು ಮಂಡಿಸಲಾಯಿತು.

ವಿಷಯ ಸಂಖ್ಯೆ: 1

ವಿಷಯ : ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕರಣ 41 (5) ರ ಅಡಿಯಲ್ಲಿ The Statutes Relating to Appointment and Promotion of Teachers and Other Academic Stafff and Measures for the Maintenance of Standards In Higher Education in the Bengaluru City University As per the UGC Regulations. 2018" ಕರಡು ಪರಿನಿಯಮಗಳನ್ನು ಪರಿಶೀಲಿಸಿ ಅನುಮೋದಿಸುವ ಕುರಿತು.

ಉಲ್ಲೇಖ:
1. ಈ ಕಛೇರಿ ಪತ್ರ ಸಂಖ್ಯೆ; ಬೆಂನವಿ/ಕುಸಆ/99/2021-22 ದಿನಾಂಕ. 06.08.2021
2. ಸರ್ಕಾರದ ಪತ್ರ ಸಂಖ್ಯೆ:ಇಡಿ 327 ಯುಬಿವಿ 2021 ದಿನಾಂಕ. 28.01.2022
3. ಸರ್ಕಾರದ ಪತ್ರ ಸಂಖ್ಯೆ:ಇಡಿ 309 ಯುಎನ್‌ಇ 2021 ದಿನಾಂಕ. 26.07.2022

**ಪರಾಮರ್ಶಕ ಟಿಪ್ಪಣಿ:**

ವಿಶ್ವವಿದ್ಯಾನಿಲಯ ಸಿದ್ಧಪಡಿಸಿದ "Draft Statutes Relating to Appointment and Promotion of Teachers and Other Academic Stafff and for implementation of revised UGC pay Scales in Bengaluru City University -2020 ಕರಡು ಪರಿನಿಯಮಗಳನ್ನು ದಿನಾಂಕ 19.08.2020 ರಂದು ಜರುಗಿಸ ಹಣಕಾಸು ಸಮಿತಿ, ದಿನಾಂಕ 24.08.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್

ಮತ್ತು ದಿನಾಂಕ 30.09.2020 ವಿಶೇಷ ಸಿಂಡಿಕೇಟ್ ಹಾಗೂ 30.11.2020 ರ ಸಿಂಡಿಕೇಟ್ ಸಭೆಗಳ ನಿರ್ಣಯದ ಮೇರೆಗೆ ಅನುಮೋದನೆ ಪಡೆದು ಉಲ್ಲೇಖ (1) ರ ಈ ಕಛೇರಿ ಪತ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಬೋಧಕ ಸಿಬ್ಬಂದಿಗಳ ನೇಮಕಾತಿ ಮತ್ತು ಸಂದರ್ಶನಕ್ಕಾಗಿ ಪ್ರತ್ಯೇಕ ಪರಿನಿಯಮಗಳನ್ನು ಒಂದೇ ಪರಿನಿಯಮಗಳಲ್ಲಿ ಅಳವಡಿಸಿಕೊಂಡು ಮರು ಪ್ರಸ್ತಾವನೆ ಸಲ್ಲಿಸಲು ಹಾಗೂ ಬೋಧಕ ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಅರ್ಜಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಲಕ ಪರಿಶೋಧನೆ ನಡೆಸಿ, ನಿರ್ದಿಷ್ಟ ಸಂಖ್ಯೆಯ ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಸಂದರ್ಶನದ ವೇಳೆ ಪಡೆಯುವ ಕುರಿತಂತೆ ಪರಿನಿಯಮಗಳಲ್ಲಿ ಅಳವಡಿಸಿಕೊಂಡು ಮರುಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ.

ಈ ಮಧ್ಯ ಸರ್ಕಾರದ ಆದೇಶ ಸಂಖ್ಯೆ: ಇಡಿ 309 ಯುಎನ್ಇ 2021, ದಿನಾಂಕ 17.11.2021 ರಲ್ಲಿ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂಬಂಧ ಮಾದರಿ ಪರಿನಿಮಾವಳಿಗಳನ್ನು ರಚಿಸಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು, ಸದರಿ ಸಮಿತಿ ದಿನಾಂಕ 13.07.202022 ರಂದು ಸರ್ಕಾರಕ್ಕೆ ಸಲ್ಲಿಸಿದ ಕರಡು ಮಾದರಿ ಪರಿನಿಯಮಗಳನ್ನು ಉಲ್ಲೇಖ (3)ರ ಸರ್ಕಾರದ ಪತ್ರದಲ್ಲಿ ವಿಶ್ವವಿದ್ಯಾನಿಲಯಕ್ಕೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿರುತ್ತಾರೆ. ಸದರಿ ಪರಿನಿಯಮಗಳಲ್ಲಿ ಸರ್ಕಾರದ ಸೂಚನೆಯಂತೆ ಪ್ರವೇಶ ಪರೀಕ್ಷೆ / ಪರಿಶೀಲನೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಇತರೆ ಮಂಡಳಿಗಳ / ವಿಶ್ವವಿದ್ಯಾನಿಲಯದಿಂದ ಜರುಗಿಸಲು ಮತ್ತು ನಿರ್ದಿಷ್ಟ ಸಂಖ್ಯೆಯ ಅಭ್ಯರ್ಥಿಗಳ ಪಟ್ಟಿಯನ್ನು ಪಡೆಯುವ ಹಾಗೂ ಈ ಕುರಿತು ಅಗತ್ಯ ವಿಧಿ ವಿಧಾನಗಳನ್ನು ಪರಿನಿಯಮಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಸರ್ಕಾರದ ಸೂಚನೆಯಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರ ಅಧ್ಯಕ್ಷತೆಯ ಸಮಿತಿ ಸರ್ಕಾರಕ್ಕೆ ಸಲ್ಲಿಸಿದ ಮಾದರಿ ಪರಿನಿಯಮಗಳನ್ನು ಹಣಕಾಸು ಸಮಿತಿಯ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗಳ ಪರಿಶೀಲನೆಗೆ ಮಂಡಿಸಿದ್ದು, ಸದರಿ ಪ್ರಾಧಿಕಾರಗಳ ಶಿಫಾರಸ್ಸುಗಳನ್ನು ಸಭೆಯಲ್ಲಿ ಮಂಡಿಸಲಾಗವುದು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 41(5) ರ ಅಡಿಯಲ್ಲಿ ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ವಿವರಣೆ

ಸಭಾಧ್ಯಕ್ಷರು ಸರ್ಕಾರ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಡಾ. ಬಿ. ತಿಮ್ಮೇಗೌಡ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕರಣ 40 (i) (k) (o) (p) 41 (1), 53 ಮತ್ತು 54 ಅಡಿಯಲ್ಲಿ ರಚಿಸಿದ ಕರಡು ಪರಿನಿಯಮಗಳ ವಿಶಿಷ್ಟ ಅಂಶಗಳನ್ನು ಸಭೆಗೆ ವಿವರಿಸಿದರು.

ಪ್ರಸ್ತುತ ಕರಡು ಪರಿನಿಯಮಗಳನ್ನು ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಮಾರ್ಗ ಸೂಚಿಗಳ ಪ್ರಕಾರ ಸಿದ್ಧಪಡಿಸಿ, 2020ರಲ್ಲಿ ಆಗಿನ ಹಣಕಾಸು ಸಮಿತಿ, ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಕೇಟ್ ಪ್ರಾಧಿಕಾರಗಳ ಒಪ್ಪಿಗೆ ಪಡೆದು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರ ಕೆಲವು ಸೂಚನೆಗಳನ್ನು ನೀಡಿ, ಪರಿನಿಯಮಾವಳಿಗಳನ್ನು ಪರಿಷ್ಕರಿಸಿ ಮರು ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ್ದು, ಅದರಲ್ಲಿ ಪ್ರಮುಖವಾಗಿ ಬೋಧಕ

ಹುದ್ದೆಗಳ ನೇರ ನೇಮಕಾತಿಗೆ ಸಂಬಂಧಿಸಿದ ಸ್ವೀಕೃತವಾಗುವ ಅರ್ಜಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಪರಿಶೋಧನೆ ನಡೆಸಿ ನಿರ್ದಿಷ್ಟ ಸಂಖ್ಯೆಯ ಅಭ್ಯರ್ಥಿಗಳನ್ನು ಸಂದರ್ಶನ ಸಮಯದಲ್ಲಿ ಪಡೆಯವ ಅಂಶವನ್ನು ಪರಿನಿಯಮಗಳಲ್ಲಿ ಅಳವಡಿಸಿ ಮರು ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ.

ಈ ಮಧ್ಯ ರಾಜ್ಯ ಸರ್ಕಾರದ, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲ ವಿಶ್ವವಿದ್ಯಾನಿಲಯಗಳಿಗೆ ಅನ್ವಯವಾಗುವಂತೆ, ಏಕರೂಪದ ಪರಿನಿಯಮಗಳನ್ನು ರಚಿಸಲು ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಡಾ.ಬಿ.ತಿಮ್ಮೇಗೌಡ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಸದರಿ ಸಮಿತಿ ಪರಿನಿಯಮಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ಕರಡು ಮಾದರಿ ಪರಿನಿಯಮಗಳನ್ನು ಸರ್ಕಾರ ಎಲ್ಲ ವಿಶ್ವವಿದ್ಯಾನಿಲಯಗಳಿಗೆ ಕಳುಹಿಸಿ ಅಗತ್ಯಕ್ರಮ ವಹಿಸಲು ಸೂಚಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಭೆಯಲ್ಲಿ ಕರಡು ಪರಿನಿಯಮಗಳನ್ನು ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

ಸಂಬಂಧಿಸಿದ ವಿಶ್ವವಿದ್ಯಾನಿಲಯಗಳು ಅರ್ಜಿಗಳನ್ನು ಆಹ್ವಾನಿಸಿ, ಎಲ್ಲ ಅರ್ಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯುವ ವ್ಯವಸ್ಥೆಯ ಬದಲು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ಇತರೆ ಮಂಡಳಿ / ವಿಶ್ವವಿದ್ಯಾಲಯದಿಂದ ಅರ್ಹತಾ ಪರೀಕ್ಷೆ ಜರುಗಿಸಿ, ನಿರ್ದಿಷ್ಟ ಸಂಖ್ಯೆಯ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪಡೆದು ಸಂದರ್ಶನ ಹಾಗೂ ನೇಮಕಾತಿಯ ವಿಧಿವಿಧಾನಗಳನ್ನು ಆಯಾ ವಿಶ್ವವಿದ್ಯಾನಿಲಯಗಳು ನಿರ್ವಹಿಸುವ ಅವಕಾಶ ಕಲ್ಪಿಸಲಾಗಿದೆ. ಉಳಿದಂತೆ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ ನಿರ್ದಿಷ್ಟ ಪಡಿಸಿದ ನಿಯಮಗಳನ್ನು ಉಳಿಸಿಕೊಳ್ಳಲಾಗಿದೆ. ಈ ವ್ಯವಸ್ಥೆಯಿಂದ ಗುಣಮಟ್ಟ ಕಾಪಾಡಲು ಸಾಧ್ಯವಾಗುತ್ತದೆ ಎಂದು ತಿಳಿಸಿ ಈ ಮಾದರಿ ಪರಿನಿಯಮಾವಳಿಗಳು, ಎಲ್ಲ ಗುಣಾಂಶಗಳನ್ನು ಹೊಂದಿರುವ ಉತ್ತಮ ಪರಿನಿಯಮಾವಳಿಯಾಗಿದ್ದು ದಿನಾಂಕ 04.08.2022 ರಂದು ಜರುಗಿದ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಇದ್ನು ಪರಿಶೀಲಿಸಿ ಅನುಮೋದನೆ ನೀಡಿರುತ್ತದೆ. ಕಾರಣ ಸಭೆ ಇದನ್ನು ಪರಿಗಣಿಸಿ ಅನುಮೋದಿಸಬಹುದೆಂದು ಪ್ರಸ್ತಾಪಿಸಿದರು.

ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ, ಶ್ರೀ ಕೇಶವ ಪ್ರಸಾದ, ಡಾ ಎಸ್. ಹರಿಪ್ರಸಾದ, ಡಾ. ಗುರುನಾಥ್ ರಾವ್ ವೈದ್ಯ, ಡಾ. ಎನ್. ನರಸಿಂಹಮೂರ್ತಿಯವರು ಚರ್ಚೆಯಲ್ಲಿ ಭಾಗವಹಿಸಿದರು. ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು, ರಾಜ್ಯದ ಹಲವು ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ಮಹಾವಿದ್ಯಾನಿಲಯಗಳಲ್ಲಿ ಶಿಕ್ಷಕರ ಕೊರತೆ, ಖಾಲಿ ಇರುವ ಹುದ್ದೆಗಳನ್ನು ಹಲವಾರು ವರ್ಷಗಳಿಂದ ಭರ್ತಿ ಆಗದೇ ಇರುವ ಕುರಿತು ಸರ್ಕಾರದ ಹಂತದ ವಿವಿಧ ಸಮಿತಿಗಳಲ್ಲಿ ಚರ್ಚೆಯಾಗಿದ್ದು, ಈ ಪರಿನಿಯಮಾವಳಿಯಿಂದ ಬೋಧಕ ಸಿಬ್ಬಂದಿಯ ನೇಮಕಾತಿಗೆ ಸಹಾಯವಾಗುವುದರ ಕಾರಣ ಅನುಮೋದಿಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ನಿರ್ಣಯ:**

ಚರ್ಚೆಯ ನಂತರ **"The Statutes Relating to Appointment and Promotion of Teachers and Other Academic Staff and Measures for the Maintenance of Standards In Higher Education in the Bengaluru City University, As per the UGC Regulations 2018"** **ಕರಡು ಪರಿನಿಯಮಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆ ಸರ್ವಾನುಮತದ ಅನುಮೋದನೆ ನೀಡಿ ಸಿಂಡಿಕೇಟ್ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು.**

ವಿಷಯ ಸಂಖ್ಯೆ: 2

Sub: Introduction of P.G. Diploma Courses in the Bengaluru City University

***REFERENCE NOTE***:

The Chairperson P.G. Dept. of Studies and Research in Commerce in his letter dated 04.08.2022, has requested for introducing the following P.G. Diploma Courses in Bengaluru City University to be offered by the Post Graduate Dept. of Studies and Research in Commerce from the Academic Year 2022-23

1. PG Diploma in Business Analytics
2. PG Diploma in Entrepreneurship and Family Business

The detailed course structure, eligibility criteria, syllabus will be prepared by the Board of Studies after institution of these courses.

Hence the matter is placed before the Academic Council for consideration and approval

ವಿವರಣೆ

ಸದಸ್ಯರಾದ ಶ್ರೀ ಕೇಶವ ಪ್ರಸಾದ ರವರು ಪ್ರಸ್ತಾಪಿಸಲಾದ ಪಿ.ಜಿ. ಡಿಪ್ಲೋಮ ಕೋರ್ಸುಗಳಿಗೆ ಪ್ರವೇಶ ಪಡೆಯವ ಅಭ್ಯರ್ಥಿಗಳು ಪದವಿ ಪಡೆದ ನಂತರ ಕಲ್ಪಿಸಬಹುದಾದ ವೃತ್ತಿಪರ ಅವಕಾಶಗಳು ಹಾಗೂ ಈ ವ್ಯಾಸಂಗದ ಉಪಯುಕ್ತತೆ ಕುರಿತು ಮಾಹಿತಿ ಬಯಸಿದರು. ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ಯವರು ಈ ವ್ಯಾಸಂಗಕ್ಕೆ ಅಗತ್ಯವಾದ ವಿದ್ಯಾರ್ಹತೆ ಕುರಿತು ಮಾಹಿತಿ ಬಯಸಿದರು ಹಾಗೂ ಪ್ರಸ್ತುತ ಸಂದರ್ಭದಲ್ಲಿ ಹಣಕಾಸು ಸಲಹೆಗಾರರ ಅಗತ್ಯ ಹೆಚ್ಚಗಿ ಸಂಬಂಧಿಸಿದ ವ್ಯಾಸಂಗಳನ್ನು ಪ್ರಾರಂಭಿಸಬೇಕೆಂದು ಅಭಿಪ್ರಾಯಪಟ್ಟರು.

ಸದಸ್ಯರಾದ ಯೋಗೀಶ್ ರಾವ್ ಮತ್ತು ಆತ್ಮ ವಿ ಹಿರೇಮಠ ರವರು ಮಲ್ಟಿಮೀಡಿಯ, ಅನಿಮೇಶನ್, ವೆಟರ್ನರಿ ಕೋರ್ಸು, ಪ್ಯಾರ ಮೆಡಿಕಲ್ ಕೋರ್ಸುಗಳಲ್ಲಿ ಪಿ.ಜಿ. ಡಿಪ್ಲೋಮ ಕೋರ್ಸುಗಳು ಪ್ರಾರಂಭಿಸುವ ಕುರಿತು ಪರಿಶೀಲಿಸಬೇಕೆಂದು ತಿಳಿಸಿದರು.

ವಾಣಿಜ್ಯ ಅಧ್ಯಯನ ಮಂಡಳಿ ಅಧ್ಯಕ್ಷರು ಹಾಗೂ ಸಭೆಯ ಸದಸ್ಯರಾದ ಡಾ. ಎಂ. ಮುನಿರಾಜು ರವರು ಪಿ.ಜಿ. ಡಿಪ್ಲೋಮ ಕೋರ್ಸುಗಳ ಪ್ರಸ್ತುತೆಯನ್ನು ಸಭೆಗೆ ವಿವರಿಸಿ, ಈ ಕೋರ್ಸುಗಳು ವೃತ್ತಿಪರ ಕೋರ್ಸುಗಳಾಗಿದ್ದು ಈಗಾಗಲೇ ಉದ್ಯಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೃತ್ತಿನಿರತರಿಗೆ ಅನುಕೂಲವಾಗಲಿದೆ. ಈ ಕೋರ್ಸುಗಳನ್ನು ಸಾಯಂಕಾಲ ಹಾಗೂ ವಾರಾಂತ್ಯಕ್ಕೆ ಬೋಧಿಸುವ ಯೋಜನೆ ಇದೆ. ಪಠ್ಯಕ್ರಮವನ್ನು ಉದ್ಯಮ ತಜ್ಞರೊಂದಿಗೆ ಹಾಗೂ ವೃತ್ತಿಪರ ಲೆಕ್ಕಪರಿಶೋಧನರೊಂದಿಗೆ ಚರ್ಚಿಸಿ ನಂತರ ಪಠ್ಯಕ್ರಮ ಹಾಗೂ ಅರ್ಹತಾ ನಿಯಮಗಳನ್ನು ಈ ಸಭೆಗೆ ಮಂಡಿಸಿ ಅನುಮೋದನೆ ಪಡೆಯಲಾಗುವದು ಪ್ರಸ್ತುತ ಈ ಕೋರ್ಸುಗಳನ್ನು ಪ್ರಾರಂಭಿಸಲು ವಿದ್ಯಾವಿಷಯಕ ಪರಿಷತ್ತಿನ ತಾತ್ವಿಕ ಅನುಮೋದನೆ ನೀಡಬೇಕೆಂದು ತಿಳಿಸಿದರು.

ವಿಜ್ಞಾನ ನಿಕಾಯದ ಡೀನರಾದ ಡಾ. ವಿ.ಆರ್ ದೇವರಾಜ್ ರವರು ಪ್ರತಿಕ್ರಿಯೆ ನೀಡಿ, ವಾಣಿಜ್ಯ ವಿಭಾಗದಲ್ಲಿ ಹೊಸದಾಗಿ ಪಿ.ಜಿ. ಡಿಪ್ಲೋಮ ಕೋರ್ಸುಗಳನ್ನು ಪ್ರಾರಂಭಿಸುವುದು ಸ್ವಾಗತಾರ್ಹ. ಆದರೆ, ಇಂತಹ ಕೋರ್ಸು ಪ್ರಾರಂಭಿಸಲು ಅಗತ್ಯ ಪೂರ್ವ ಸಿದ್ದತೆ ಹಾಗೂ ಭೌತಿಕ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಉದ್ಯಮಗಳಿಂದ ಮತ್ತು ವೃತ್ತಿಪರ ಲೆಕ್ಕ ಪರಿಶೋಧಕರನ್ನು ಆಹ್ವಾನಿಸಿ ವಿದ್ಯಾರ್ಥಿಗಳಿಗೆ ಬೋಧನೆ ನೀಡಲು ಸೂಕ್ತ ಹಾಗೂ ಗೌರವಯುತವಾದ ಸಂಭಾವನೆ ನೀಡಬೇಕಾಗುತ್ತದೆ ಕಾರಣ ಅಗತ್ಯ ಸಿದ್ದತೆಗಳನ್ನು ಮಾಡಿಕೊಂಡು ಕೋರ್ಸು ಪ್ರಾರಂಭಿಸುವುದು ಉತ್ತಮವೆಂದು ಅಭಿಪ್ರಾಯಪಟ್ಟರು.

ಮಾನ್ಯ ಕುಲಪತಿಗಳು ವಿವರಣೆ ನೀಡಿ, ಪ್ರಾರಂಭಿಕ ಹಂತದಲ್ಲಿ ಕೆಲವು ಅಡೆತಡೆಗಳು ಇರುವುದು ಸ್ವಾಭಾವಿಕ. ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಕಟ್ಟಡಗಳ ನಿರ್ಮಾಣ ಹಾಗೂ ಪಾರಂಪರಿಕ ಕಟ್ಟಡಗಳು ನವೀಕರಣದ ಕೆಲಸ ತೀವ್ರಗತಿಯಲ್ಲಿ ಮುಂದುವರೆದಿದೆ. ಸರ್ಕಾರ 59 ಬೋಧಕ ಸಿಬ್ಬಂದಿಗಳ ನೇಮಕಕ್ಕೆ ಅನುಮತಿ ನೀಡಿರುತ್ತದೆ. ಇಂದಿನ ಸಭೆಯಲ್ಲಿ ನೇಮಕಾತಿ ವಿಧಿ ವಿಧಾನಗಳ ಪರಿನಿಯಮ ಅನುಮೋದನೆಗೊಂಡಿದ್ದು, ಆದಷ್ಟು ಬೇಗ ನೇಮಕಾತಿ ಪ್ರಕ್ರಿಯೆಗಳು ಪ್ರಾರಂಭವಾಗಿ ಬೋಧಕ ಸಿಬ್ಬಂದಿಗಳ ನೇಮಕಾತಿ ಪೂರ್ಣಗೊಳ್ಳಲಿದೆ. ವಿಶ್ವವಿದ್ಯಾನಿಲಯ ಯು.ಜಿ.ಸಿ ಯಿಂದ 12(B) ಮಾನ್ಯತೆ ಹಾಗೂ NAAC ಸಂಸ್ಥೆಯಿಂದ ಮೌಲ್ಯಾಂಕನ ಹೊಂದಬೇಕಾಗಿದೆ. ಈ ದಿಸೆಯಲ್ಲಿ ಪ್ರಯತ್ನಗಳು ಮುಂದುವರೆದಿರುತ್ತವೆ. ಪ್ರಸ್ತಾಪಿಸಲಾದ ಪಿ. ಜಿ. ಡಿಪ್ಲೋಮ ಕೋರ್ಸುಗಳನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಲು ತಾತ್ವಿಕ ಒಪ್ಪಿಗೆ ನೀಡಬೇಕೆಂದು ವಿನಂತಿಸಿದರು.

ನಿರ್ಣಯ

**ಬೆಂಗಳೂರು ನಗರ ವಿಶ್ವವಿದ್ಯಾನಿಲಯ ವಾಣಿಜ್ಯ ವಿಭಾಗಳಲ್ಲಿ (1) PG Diploma in Business Analytics (2) PG Diploma in Entrepreneurship and Family Business ಗಳನ್ನು ಸ್ಥಾಪಿಸಲು ವಿದ್ಯಾವಿದ್ಯಾವಿಷಯಕ ಪರಿಷತ್ ತಾತ್ವಿಕ ಒಪ್ಪಿಗೆ ನೀಡಲು ತೀರ್ಮಾನಿಸಿತು.**

**ಪಠ್ಯಕ್ರಮ ಹಾಗೂ ಇತರ ನಿಯಮಗಳನ್ನು ಅಧ್ಯಯನ ಮಂಡಳಿ ಸಿದ್ಧಪಡಿಸಬೇಕೆಂದು ಸೂಚಿಸಲಾಯಿತು.**

ಕಲಾನಿಕಾಯದ ಡೀನರಾದ ಡಾ. ಎನ್ ನರಸಿಂಹಮೂರ್ತಿಯವರು ವಿಶ್ವವಿದ್ಯಾನಿಲಯದಿಂದ ಅವರಿಗೆ ನೀಡಿದ ನೋಟೀಸು ಕುರಿತು ಪ್ರಸ್ತಾಪಿಸಲು ಅವಕಾಶ ಕೇಳಿದಾಗ ಆಡಳಿತಾತ್ಮಕ ವಿಷಯಗಳನ್ನು ಕುರಿತು ಚರ್ಚಿಸಲು / ಪ್ರಸ್ತಾಪಿಸಲು ಅವಕಾಶವಿಲ್ಲವೆಂದು ಸಭಾಧ್ಯಕ್ಷರು ತಿಳಿಸಿದರು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು

ಕುಲಸಚಿವರು
ಸದಸ್ಯ ಕಾರ್ಯದರ್ಶಿಗಳು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ